ಕ್ರಿಮಿನಲ್ ಮಿಸ್ ಸಂಖ್ಯೆ 475/2026
ಪಿಡಬ್ಲ್ಯೂ: 01
ದಿನಾಂಕ: 31-08-2026
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆ- ಅರ್ಜಿದಾರರ ಪರ ಶ್ರೀ ಎಂಎಸ್‌ಎಂ ವಕೀಲರಿಂದ.

ಈ ಪ್ರಕರಣದಲ್ಲಿ ನಾನು 1 ನೇ ಅರ್ಜಿದಾರಳಾಗಿದ್ದು, ಇಂದು ನಾನು ನನ್ನ ಮೌಖಿಕ ಸಾಕ್ಷ್ಯದ ಬದಲು ಈ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಇದರಲ್ಲಿ ಬರೆದ ಎಲ್ಲ ವಿಷಯ ನಿಜ ಮತ್ತು ಸರಿ ಇದ್ದು ನನಗೆ ಗೊತ್ತಿದೆ.

ನಾನು ಈ ಕೆಳಕಂಡ ದಸ್ತಾವೇಜುಗಳನ್ನು ಹಾಜರು ಪಡಿಸಿದ್ದೇನೆ.

ದಿನಾಂಕ: 16-02-2026 ರಂದು ಎದುರುದಾರರು ನೀಡಿರುವ ಹಿಂಬರಹವನ್ನು ಪತ್ರವನ್ನು ಹಾಜರುಪಡಿಸಿದ್ದು, ನಿಪಿ-1 ಎಂದು ಗುರುತಿಸಲಾಯಿತು.

ಎರಡು ಪತ್ರಿಕಾ ಪ್ರಕಟಣೆಯನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-2 ಮತ್ತು ನಿಪಿ-3 ಎಂದು ಗುರುತಿಸಲಾಯಿತು.

ಮೂಲ ಆಧಾರ್ ಕಾರ್ಡನೊಂದಿಗೆ ತಾಳೆ ಮಾಡಿ ನೋಡಿ ಆಧಾರ್ ಕಾರ್ಡಿನ ದೃಢಿಕೃತ ನಕಲನ್ನು ನಿಪಿ-4 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೋರಿಕೊಂಡಂತೆ ಆದೇಶವಾಗಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಪಾಟೀ ಸವಾಲು- ಎದುರುದಾರರು ಏಕತರ್ಫಿಯಾದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.

Petitioner is present and filed affidavit in lieu of chief examination as PW.1 and got marked Ex.P-1 to Ex.P-4. Evidence closed from petitioner side.

Heard. For orders. Call on 26.09.2026.

CJ & JMFC, Savanur